# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:06.03.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.16 ಜಾಲಹಳ್ಳಿಯಲ್ಲಿ ಶ್ರೀ ಹೆಚ್. ಎಸ್. ದಯಾನಂದ, (ಸ.ಕಾ.ನಿ.ಅ,ಕೆಂಗೇರಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಹೆಚ್. ಎಸ್. ದಯಾನಂದ | ಸ.ಕಾ.ನಿ.ಅ., ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಪ್ರಾ. ಆ. ಕೇಂ.ದ ಪರವಾಗಿ ಶುಶ್ರೂಷಕಿಯರು ಹಾಜರಿದ್ದರು – 02 ಆರೋಗ್ಯ ಸಹಾಯಕಿಯವರು ಹಾಜರಿದ್ದರು |
| 3 | ಶ್ರೀ ರವಿಕುಮಾರ್ ಕೆ. ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ವೇಣು, | ಕಂದಾಯ ವಸೂಲಿಗಾರರು |
| 5 | ಶ್ರೀ ಮೋಪುರಿ | ಎ.ಎಸ್.ಐ. ಜಾಲಹಳ್ಳಿ ಪೋಲಿಸ್ ಠಾಣೆ |
| 6 | ತ್ರಿವೇಣಿ | ಪಶು ವೈದ್ಯಾಧಿಕಾರಿ, ಜಾಲಹಳ್ಳಿ |
| 7 | ಶ್ರೀ ಶ್ರೀನಿವಾಸ | ಮೇಲ್ವಿಚಾರಕರು |
| 8 | ನಾಗರಾಜ್ | ಮೇಲ್ವಿಚಾರಕರು |
| 9 | ಕಾಂತರಾಜ್ | ವಾರ್ಡ್ ಮಾರ್ಷಲ್ |
| 10 | ಲಿಂಕ್ ವರ್ಕರ್ಸ್ ಹಾಗೂ ಸಾರ್ವಜನಿಕರು ಹಾಜರಿದ್ದರು | |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) ಒಂಟಿ ಮನೆ ಬಗ್ಗೆ:-

ವಾರ್ಡ್ ನಂ.16ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತರಿಗೆ ಕೊಳಚೆ ಪ್ರದೇಶದಲ್ಲಿ ನಂ.191, ಜಾಲಹಳ್ಳಿ, ಶ್ರೀಮತಿ ರಾಣಿಯಮ್ಮಾಳ್ ರವರ ಹೆಸರಿಗೆ ಒಂಟಿ ಮನೆ ನಿರ್ಮಾಣ ಯೋಜನೆ ಅಡಿಯಲ್ಲಿ ಈ ಹಿಂದೆ ನಗರ ಪಾಲಿಕೆ ಕೌನ್ಸಿಲ್ ಅವಧಿಯ ವಾರ್ಡ್ ಕಮಿಟಿ ಅನುಮೋದನೆ ದೊರೆತಿರುತ್ತದೆ. ತದನಂತರ ದಿನಾಂಕ:02.03.2019 ರಂದು ಸದರಿ ಫಲಾನುಭವಿಯು ಮೃತರಾಗಿರುತ್ತಾರೆ ಎಂದು ಅವರ ಮಗನಾದ ಸಗಾಯ್ ರಾಜ್‌ರವರು ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ದಿನಾಂಕ:26.07.2019 ರಂದು ಸಹಾಯಕ ಕಂದಾಯ ಅಧಿಕಾರಿ, ಯಶವಂತಪುರ, ವಾರ್ಡ್ ನಂ.16ರ ಮೌಲ್ಯ ಮಾಪಕರು ಸದರಿ ಸ್ವತ್ತಿನ ಪರಿಶೀಲನೆ ನಡೆಸಿ, "ಇವರು ಹಿಂದುವಳಿದ ವರ್ಗಕ್ಕೆ ಸೇರಿದ್ದು, ಸ್ವತ್ತಿನ ಎಲ್ಲ ದಾಖಲೆಗಳನ್ನು ನೀಡಿದ್ದು, ಹಕ್ಕು ಪತ್ರದಲ್ಲಿ ಅರ್ಜಿದಾರರ ತಾಯಿಯವರ ಹೆಸರಿಗೆ ಬಂದಿರುತ್ತದೆ. ಅವರು ದಿನಾಂಕ:02.03.2019 ರಂದು ಮರಣ ಹೊಂದಿದ್ದು ಇವರ ವಾರಸುದಾರರಿಗೆ ಪಾಲಿಕೆಯಿಂದ 24.10ರ ಅಡಿಯಲ್ಲಿ ಅನುದಾನದಡಿಯಲ್ಲಿ ಒಂಟಿ ಮನೆ ನಿರ್ಮಿಸಿಕೊಳ್ಳಲು ಅರ್ಹರಾಗಿರುತ್ತಾರೆ "ಎಂದು ಮಹಜರ್ ವರದಿ ಮಾಡಿರುತ್ತಾರೆ. ಅದರಂತೆ

ಮಹಜರ್ ವರದಿ ಅನುಸಾರ ಅವರ ಮಗನಾದ ಸಗಾಯ್ ರಾಜ್ ರವರು ಸ್ವತ್ತಿನ ವಾರಸುದಾರರಾಗಿದ್ದು. ಸಗಾಯ್‌ರಾಜ್ ರವರ ಹೆಸರಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ವಾರ್ಡ್ ಸಮಿತಿಯ ಸಭೆಯಲ್ಲಿ ಶೇ.24.10 ಅಡಿಯಲ್ಲಿ ಮನೆಯನ್ನು ನಿರ್ಮಾಣ ಮಾಡಲು ಒಪ್ಪಿಗೆ ಸೂಚಿಸಲಾಯಿತು.

**2) ಕೋವಿಡ್-19 ಲಸಿಕೆ ಬಗ್ಗೆ:-**

ಕೊರೊನಾ ವಾರಿಯರ್ಸ್‌ಗಳಾದ ಆರೋಗ್ಯ ಸಿಬ್ಬಂದಿಗಳು ಹಾಗೂ ಪಾಲಿಕೆ ಸಿಬ್ಬಂದಿಗಳು ಕೋವಿಡ್ ಚುಚ್ಚುಮದ್ದು ತೆಗೆದುಕೊಂಡಿರುವ ಬಗ್ಗೆ ಅಧ್ಯಕ್ಷರು ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿದರು.

ಶುಶ್ರೂಷಕಿಯರು ಮಾತನಾಡಿ, ಮೊದಲನೇ ಹಂತದ ಕೋವಿಡ್ ಲಸಿಕೆ ನೀಡಿದ್ದು, 2ನೇ ಹಂತದ ಲಸಿಕೆ ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ತಿಳಿಸುತ್ತಾ, ತದನಂತರದ ಹಂತದಲ್ಲಿ ಹಿರಿಯ ನಾಗರೀಕರಿಗೆ ವ್ಯಾಕ್ಸಿನೇಷನ್ ನೀಡುವ ಬಗ್ಗೆಯೂ ಪ್ರಸ್ತಾಪಿಸಿದರು. ಹಾಗೂ ಇದರ ಬಗ್ಗೆ ಪೋಲೀಸ್ ಅಧಿಕಾರಿಗಳು ಕೋವಿಡ್ ವ್ಯಾಕ್ಸಿನೇಷನ್ ತೆಗೆದುಕೊಳ್ಳುವ ಕ್ರಮಗಳ ಕುರಿತು ಶುಶ್ರೂಷಕಿಯರೊಂದಿಗೆ ಸಂವಾದ ನಡೆಸಿದರು.

**3) ಕಾಮಗಾರಿ ಇಲಾಖೆ:-**

ಪೌರ ಕಾರ್ಮಿಕ ಮೇಲ್ವಿಚಾರಕರು ಬ್ಲ್ಯಾಕ್‌ಸ್ಪಾಟ್‌ಗಳಲ್ಲಿ ಡೆಬ್ರಿಸ್ ಹಾಗೂ ಸಿಲ್ಟ್ ಇರುವುದನ್ನು ಗುರುತಿಸಿ, ಅದನ್ನು ವಿಲೇವಾರಿ ಮಾಡುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ಸಹಾಯಕ ಅಭಿಯಂತರರಿಗೆ ಟ್ರ್ಯಾಕ್ಟರ್ ಮೂಲಕ ಡೆಬ್ರಿಸ್ ಮತ್ತು ಸಿಲ್ಟ್‌ಗಳನ್ನು ತೆರವುಗೊಳಿಸುವಂತೆ ಸೂಚಿಸಿದರು.

- **ಎಂದಿನಂತೆ 'ಸಹಾಯ 2.0' ಕೋಶದಲ್ಲಿ ದಾಖಲಾಗುವ ಸಾರ್ವಜನಿಕರ ದೂರುಗಳನ್ನು ವಿಲೇ ಮಾಡುವ ಬಗ್ಗೆ ಚರ್ಚಿಸಲಾಗಿದ್ದು,** ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ದೂರುಗಳು ಬಾಕಿ ಇದ್ದು, ಇದರ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ, ದೂರುಗಳನ್ನು ಶೀಘ್ರವಾಗಿ ಪರಿಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

**4) ಘನತ್ಯಾಜ್ಯಗಳ ನಿರ್ವಹಣೆ ಕುರಿತು:-**

ಮಾನ್ಯ ಅಧ್ಯಕ್ಷರು ಮಾತನಾಡಿ ಘನತ್ಯಾಜ್ಯವನ್ನು ಒಣ ಕಸ ಮತ್ತು ಹಸಿ ಕಸವಾಗಿ ವಿಂಗಡಿಸಲು ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ವಾರ್ಡ್ ಮಾರ್ಷಲ್ ಪೌರ ಕಾರ್ಮಿಕರ ಮೇಲ್ವಿಚಾರಕರಿಗೆ ಸೂಚಿಸಿದರು. ಇದಕ್ಕೆ ಮೇಲ್ವಿಚಾರಕರು ಮಾತನಾಡಿ, ತ್ಯಾಜ್ಯವನ್ನು ಒಣ ಕಸ, ಹಸಿ ಕಸ ವಿಂಗಡಿಸಲು ನಮ್ಮ ಬಳಿ ಪೌರ ಕಾರ್ಮಿಕರ ಕೊರತೆಯಿದ್ದು, ಆಟೋಗಳಿಗೆ ಒಬ್ಬ ಡ್ರೈವರ್ ಮತ್ತು ಒಬ್ಬ ಹೆಲ್ಪರ್ ನಿಯೋಜಿಸಿಕೊಡಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಇದಕ್ಕೆ ಅಧ್ಯಕ್ಷರು ಮಾತನಾಡಿ, ಲಭ್ಯವಿರುವ ಮುಂದಿನ ವಾರ್ಡ್ ಸಮಿತಿ ಸಭೆಗೆ ಗುತ್ತಿಗೆದಾರರು ಹಾಜರಿರಲು ಸೂಚಿಸಿದರು. ಮತ್ತು ಪ್ರತಿ ಆಟೋಗಳಿಗೆ ಧ್ವನಿವರ್ಧಕಗಳನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನಿರ್ದೇಶಿಸಿದರು.

5) ಬೀದಿ ನಾಯಿಗಳ ಬಗ್ಗೆ:-

ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ಪರಿಮಿತಿಯಲ್ಲಿ ಬೀದಿ ನಾಯಿಗಳ ಕಾಟ ಅತಿಯಾಗಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇವುಗಳ ನಿಯಂತ್ರಣಕ್ಕಾಗಿ, ಬಿಬಿಎಂಪಿ ಪಶುಪಾಲನಾ ವಿಭಾಗರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:16

(ಹೆಚ್. ಎಸ್. ದಯಾನಂದ)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:16